ಶ್ರೀ ಎಸ್. ರಮೇಶ್ (ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಕ್ರೀಡಾ ಸಮಿತಿಯವರು ನಮಗೆ ಇನ್ನೂ ಅಂದಾಜು ಪಟ್ಟಿ ಕಳುಹಿಸಿಕೊಟ್ಟಿಲ್ಲ. ನಮ್ಮಲ್ಲಿ ಸಭ್ಯಕ್ಕೆ ಇದ್ದ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಅದನ್ನು ನಾನು ಸದನಕ್ಕೆ ತಿಳಿಸಿದ್ದೇನೆ. ಮಾನ್ಯ ಸದಸ್ಯರು ಅಲ್ಲಿ ಇನ್ನೂ ಹೆಚ್ಚು ಹಣ ಖರ್ಚುಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮಟ್ಟದಲ್ಲಿ ಕ್ರೀಡಾ ಸಮಿತಿಗಳಲ್ಲಿ ಒಬ್ಬರು ಎ.ಸಿ. ಮತ್ತು ಡಿ.ವೈ.ಎಸ್.ಪಿ. ಯವರು ಇನ್ನೊಬ್ಬ ಆಫೀಸರ್ ಇರುತ್ತಾರೆ. ಬರೀ ಅಪಿಷಿಯಲ್ಸ್ ಕಮಿಟಿ ಇದೆ. ಅಲ್ಲಿ ಸುಮಾರು ೬ ಲಕ್ಷ ರೂಪಾಯಿಗಳನ್ನು ಕಲೆಕ್ಟ್ ಮಾಡಿ ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಬ್ಯಾಂಕಿನಲ್ಲಿ ಒಟ್ಟು ೧೫ ಲಕ್ಷ ರೂಪಾಯಿಗಳಿದೆ. ಆದರಲ್ಲಿ ಸುಮಾರು ೪ ಲಕ್ಷ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ಈ ಎರಡೂ ಕ್ರೀಡಾಂಗಣಗಳಿಗೆ ಅಲ್ಲಿನ ಆಫೀಸರ್ಸ್ ಮಾನ ಬಂದ ಹಾಗೆ ಹಣ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ ಈ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ ಎಂದರೆ ಹೇಗೆ ? ಅಲ್ಲಿನ ಕೆಲಸದ ಬಗ್ಗೆ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡುವುದೇ ಇಲ್ಲವೇ.....

ಅಧ್ಯಕ್ಷರು.—ನೀವು ಡಿಟೇಲ್ಸ್ ಬರೆದು ಕೊಡಿ.

ಶ್ರೀ ಶಿವಾನಂದ ಎಚ್. ಕೌಜಲಗಿ.—ನಾನು ಈ ಪ್ರಶ್ನೆಯನ್ನು ೩-೪ ಸಾರಿ ಕೇಳಿದ್ದೇನೆ. ಇದೇ ಉತ್ತರ ಬರುತ್ತಿದೆ. ಮಾಹಿತಿ ತರಿಸಿಕೊಳ್ಳುವುದಕ್ಕೆ ಆಗಲಿಲ್ಲ ಎಂದರೆ ಹೇಗೆ ?

ಅಧ್ಯಕ್ಷರು.—ಅವರು ಹೊಸದಾಗಿ ಮಂತ್ರಿಯಾಗಿದ್ದಾರೆ. ಅವರು ಬಂದು ೮ ದಿವಸ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಸಾರ್ವಜನಿಕರ ಹಣ ಅಲ್ಲಿ ಲ್ಯಾಪ್ಸ್ ಆಗುತ್ತಿದೆ.

ಅಧ್ಯಕ್ಷರು.—ಮಂಡ್ಯ ಜಿಲ್ಲಾ ಪರಿಷತ್ತಿನಲ್ಲಿ ಸುಮಾರು ೭ ಕೋಟಿ ರೂಪಾಯಿಗಳಷ್ಟು ಹಣ ಲ್ಯಾಪ್ಸ್ ಆಗಿದೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಂದರೆ ಹೇಳುವವರು ಕೇಳುವವರು ಯಾರೂ ಇಲ್ಲವೇ ?

ಅಧ್ಯಕ್ಷರು.—ಈ ಹೇಳುವವರು ಕೇಳುವವರು ಈಗ ಬಂದಿದ್ದಾರೆ.

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಲ್ಲಿ ಖರ್ಚಾಗಿರುವುದು ಕೇವಲ ೩೮ ಸಾವಿರ ರೂಪಾಯಿಗಳು ಎಂದು ಯಾವ ಆಧಾರದ ಮೇಲೆ ಹೇಳುತ್ತಾರೆ ?

ಶ್ರೀ ಎಸ್. ರಮೇಶ್,—ಮಾನ್ಯ ಸದಸ್ಯರು ಹೇಳುವುದು ಸರಿ ಇದೆ. ಅಧಿಕಾರಿಗಳು ಏನು ಮಾಹಿತಿ ಕೊಟ್ಟಿದ್ದಾರೋ ಅದನ್ನು ನಾನು ಇಲ್ಲಿ ಕೊಟ್ಟಿದ್ದೇನೆ. ನಾನು ಸಭ್ಯದಲ್ಲಿಯೇ ಒಂದು ವಿಸಿಟಿಂಗ್ ಕರೆದು ಅಲ್ಲಿಂದ ಏತಕ್ಕೆ ಮಾಹಿತಿ ಬಂದಿಲ್ಲ ಎಂದು ವಿಚಾರ ಮಾಡುತ್ತೇನೆ, ಆ ವಿಸಿಟಿಂಗ್‌ಗೆ ಮಾನ್ಯ ಸದಸ್ಯರನ್ನು ಸಹ ಕರೆಯುತ್ತೇನೆ. ಅವರ ಎದುರುಗಡೆಯೇ ಇದನ್ನು ತೀರ್ಮಾನ ಮಾಡೋಣ.

ಚಿನ್ನಪ್ಪ ರೆಡ್ಡಿ ವರದಿಯ ಬಗ್ಗೆ

೧೧೬. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ).— ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನ್ಯಾಯಮೂರ್ತಿ ಓ. ಚಿನ್ನಪ್ಪರೆಡ್ಡಿ ಆಯೋಗ ತನ್ನ ವರದಿಯನ್ನು ಯಾವಾಗ ಸರ್ಕಾರಕ್ಕೆ ಸಲ್ಲಿಸಿತು;

ಆ) ಹಾಗಿದ್ದಲ್ಲಿ ವರದಿಯ ಮುಖ್ಯಾಂಶಗಳೇನು;

ಇ) ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು).—

ಅ) ದಿನಾಂಕ ೭-೪-೯೦ರಂದು ಸಲ್ಲಿಸಿದೆ.